# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಟಿ.ರಾಮಪ್ಪ ತಂದೆ ದಿ//ವೀರಪ್ಪ,<br>2)ಟಿ.ಪಂಪಪ್ಪ ತಂದೆ ದಿ//ವೀರಪ್ಪ,<br>3)ಟಿ.ಚನ್ನಪ್ಪ ತಂದೆ ದಿ//ವೀರಪ್ಪ,<br>4)ಟಿ.ಸಕ್ರಪ್ಪ ತಂದೆ ದಿ//ವೀರಪ್ಪ,<br>ಮಹಜನದಹಳ್ಳಿ ಗ್ರಾಮ, ಹಡಗಲಿ ತಾ. | ತಿಗರಿ ಕರಿಯಮ್ಮ ಗಂಡ ಅಜ್ಜಪ್ಪ,<br>ಅಂಬಳಿ ಗ್ರಾಮ, ಹೆಚ್.ಬಿ.ಹಳ್ಳಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಮಹಾಜನದಹಳ್ಳಿ | 427/ಬಿ | 4–36 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಮಹಾಜನದಹಳ್ಳಿ ಗ್ರಾಮದ ಸ.ನಂ.427/ಬಿ ವಿ:4–36 ಎಕರೆ ಜಮೀನಿಗೆ ಸಂಬಂಧಿಸಿದಂತೆ, ದಸ್ತಾವೇಜು ಸಂಖ್ಯೆ 2794/2015–16 ದಿನಾಂಕ 06–11–2015 ರಂದು ಮಹಾಜನದಹಳ್ಳಿ ಗ್ರಾಮದ ನಿವಾಸಿಯಾದ 1)ಟಿ.ರಾಮಪ್ಪ ತಂದೆ ದಿ//ವೀರಪ್ಪ, 2)ಟಿ.ಪಂಪಪ್ಪ ತಂದೆ ದಿ//ವೀರಪ್ಪ, 3)ಟಿ.ಚನ್ನಪ್ಪ ತಂದೆ ದಿ//ವೀರಪ್ಪ ಮತ್ತು 4)ಟಿ.ಸಕ್ರಪ್ಪ ತಂದೆ ದಿ//ವೀರಪ್ಪ ಇವರು ನೋಂದಾಯಿತ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಉಪನೋಂದಣಾಧಿಕಾರಿ, ಹೂವಿನಹಡಗಲಿ ರವರು ವರದಿ ಮಾಡಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ:16–11–2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 25–11–2015 ರಂದು ಅಂಬಳಿ ಗ್ರಾಮದ ನಿವಾಸಿಯಾದ ತಿಗರಿ ಕರಿಯಮ್ಮ ಗಂಡ ಅಜ್ಜಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು M.NO.17/2015-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿ:20–01–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿ ಪ್ರತ್ಯೇಕವಾಗಿ ಲಿಖಿತ ಒಪ್ಪಿಗೆ ಪತ್ರ ಸಲ್ಲಿಸುತ್ತಾ, ಉಭಯರು ಸಕ್ರಪ್ಪ ತಂದೆ ವೀರಪ್ಪ ಇವರಿಗೆ ಬಂದ ಆಸ್ತಿಯಲ್ಲಿ ಸಕ್ರಪ್ಪ ತಂದೆ ವೀರಪ್ಪ ಹಾಗೂ ಭಾಗ್ಯಮ್ಮ ಗಂಡ ಸಕ್ರಪ್ಪ ಇವರಿಗೆ ಜಂಟಿಯಾಗಿ ಖಾತೆ ಬದಲಾವಣೆ ಮಾಡಲು ಒಪ್ಪಿಗೆ ಸಲ್ಲಿಸಿರುವುದಾಗಿ ಉಭಯರು ಮೌಖಿಕವಾಗಿ ತಿಳಿಸಿದರು. ಉಭಯರು ಸಲ್ಲಿಸಿದ ಲಿಖಿತ ಒಪ್ಪಿಗೆ ಪತ್ರಗಳಲ್ಲಿ ಸಕ್ರಪ್ಪ ತಂದೆ ವೀರಪ್ಪ ಇವರಿಗೆ ಬಂದ ಆಸ್ತಿಯಲ್ಲಿ ಸಕ್ರಪ್ಪ ತಂದೆ ವೀರಪ್ಪ ಹಾಗೂ ಭಾಗ್ಯಮ್ಮ ಗಂಡ ಸಕ್ರಪ್ಪ ಇವರಿಗೆ ಜಂಟಿಯಾಗಿ ಖಾತೆ ಬದಲಾವಣೆ ಮಾಡಲು ತಕರಾರು ಇರುವುದಿಲ್ಲ ಎಂದು ಮತ್ತು ತಕರಾರುದಾರರು ಸಕ್ರಪ್ಪ ತಂದೆ ವೀರಪ್ಪ ಹಾಗೂ ಭಾಗ್ಯಮ್ಮ ಗಂಡ ಸಕ್ರಪ್ಪ ಎಂದು ಜಂಟಿ ಖಾತೆ ಬದಲಾವಣೆ ಮಾಡಲು ಒಪ್ಪಿದಲ್ಲಿ ತಕರಾರು ಅರ್ಜಿಯನ್ನು ರಾಜೀ ಮಾಲಕ ವಾಪಸ್ಸು ಪಡೆಯುತ್ತೇನೆ ಎಂದು ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಉಭಯರು ಸಲ್ಲಿಸಿದ ದಾಖಲೆಗಳು ಮತ್ತು ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಸ.ನಂ.427/ಬಿ ವಿಸ್ತೀರ್ಣ:4–36 ಎಕರೆ ಜಮೀನನ್ನು ನೋಂದಾಯಿತ ಪಾಲು ವಿಭಾಗ ಪ್ರಕಾರ 1)ಟಿ.ರಾಮಪ್ಪ ತಂದೆ ದಿ// ತಿಗರಿ ವೀರಪ್ಪ ಇವರ ಹೆಸರಿಗೆ 1–00 ಎಕ್ರೆ, 2)ಟಿ.ಪಂಪಪ್ಪ ತಂದೆ ದಿ// ತಿಗರಿ ವೀರಪ್ಪ ಇವರಿಗೆ 1–26ಎಕ್ರೆ, 3)ಟಿ.ಚನ್ನಪ್ಪ ತಂದೆ ದಿ// ತಿಗರಿ ವೀರಪ್ಪ ಇವರಿಗೆ 1–00ಎಕ್ರೆ ಮತ್ತು 4)ಟಿ.ಸಕ್ರಪ್ಪ ತಂದೆ ದಿ// ತಿಗರಿ ವೀರಪ್ಪ ಇವರ ಹೆಸರಿಗೆ 1–10 ಎಕ್ರೆ ಜಮೀನನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ. ತಕರಾರುದಾರರು ಟಿ.ಸಕ್ರಪ್ಪ ತಂದೆ ದಿ// ತಿಗರಿ ವೀರಪ್ಪ ಇವರ ಹೆಸರಿಗೆ 1–10 ಎಕ್ರೆ ಬಂದಿರುವ ವಿಸ್ತೀರ್ಣದಲ್ಲಿ ಟಿ.ಸಕ್ರಪ್ಪನ ಪತ್ನಿಯಾದ ಭಾಗ್ಯಮ್ಮ ಗಂಡ ಸಕ್ರಪ್ಪ ಇವರ ಹೆಸರನ್ನು ಜಂಟಿಯಾಗಿ ಹಕ್ಕು ಬದಲಾವಣೆ ಮಾಡಿದಲ್ಲಿ ತಮ್ಮ ತಕರಾರನ್ನು ವಾಪಸ್ಸು ಪಡಯುವುದಾಗಿ ಮೌಖಿಕವಾಗಿ ತಿಳಿಸುತ್ತಾ, ಲಿಖಿತ ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಅದೇ ರೀತಿ ಅರ್ಜಿದಾರರು ಸಹ ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಾ ಟಿ.ಸಕ್ರಪ್ಪ ತಂದೆ ದಿ// ತಿಗರಿ ವೀರಪ್ಪ ಇವರ ಹೆಸರಿಗೆ 1–10 ಎಕ್ರೆ ಬಂದಿರುವ ವಿಸ್ತೀರ್ಣದಲ್ಲಿ ಟಿ.ಸಕ್ರಪ್ಪನ ಪತ್ನಿಯಾದ ಭಾಗ್ಯಮ್ಮ ಗಂಡ ಸಕ್ರಪ್ಪ ಇವರ ಹೆಸರನ್ನು ಸೇರಿಸಿ ಹಕ್ಕು ಬದಲಾವಣೆ ಮಾಡಲು ತಿಳಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/09/2015–16 ದಿನಾಂಕ:13–04–2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.17/2015-16 ರ ಪ್ರಕರಣದಲ್ಲಿ 1)ಟಿ.ರಾಮಪ್ಪ ತಂದೆ ದಿ// ತಿಗರಿ ವೀರಪ್ಪ ಇವರ ಹೆಸರಿಗೆ 1–00 ಎಕ್ರೆ, 2)ಟಿ.ಪಂಪಪ್ಪ ತಂದೆ ದಿ// ತಿಗರಿ ವೀರಪ್ಪ ಇವರಿಗೆ 1–26ಎಕ್ರೆ, 3)ಟಿ.ಚನ್ನಪ್ಪ ತಂದೆ ದಿ// ತಿಗರಿ ವೀರಪ್ಪ ಇವರಿಗೆ 1–00ಎಕ್ರೆ ಮತ್ತು 4)ಟಿ.ಸಕ್ರಪ್ಪ ತಂದೆ ದಿ// ತಿಗರಿ ವೀರಪ್ಪ ಮತ್ತು ಭಾಗ್ಯಮ್ಮ ಗಂಡ ಸಕ್ರಪ್ಪ ಇವರ ಹೆಸರಿಗೆ ಜಂಟಿಯಾಗಿ 1–10 ಎಕ್ರೆ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪತಹಶೀಲ್ದಾರರು
ನಾಡ ಕಾರ್ಯಾಲಯ,
ಇಟ್ಟಿಗಿ

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.